


**ISSN Print:** 2394-7500
**ISSN Online:** 2394-5869
**Impact Factor:** 8.4
IJAR 2022; 8(12): 232-235
www.allresearchjournal.com
Received: 01-09-2022
Accepted: 05-10-2022

**ಡಾ. ನಾಗರಾಜು ಎಚ್.ಎಸ್**
ಅಸೋಸಿಯೇಟ್ ಪ್ರೊಫೆಸರ್,
ಸಮಾಜಶಾಸ್ತ್ರ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ
ಕಾಲೇಜು, ಕೆಂಗೇರಿ,
ಬೆಂಗಳೂರು, ಕರ್ನಾಟಕ,
ಭಾರತ

**Corresponding Author:**
**ಡಾ. ನಾಗರಾಜು ಎಚ್.ಎಸ್**
ಅಸೋಸಿಯೇಟ್ ಪ್ರೊಫೆಸರ್,
ಸಮಾಜಶಾಸ್ತ್ರ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ
ಕಾಲೇಜು, ಕೆಂಗೇರಿ,
ಬೆಂಗಳೂರು, ಕರ್ನಾಟಕ,
ಭಾರತ

# ಸಬಲೀಕರಣದತ್ತ ಮಹಿಳೆಯರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ

**ಡಾ. ನಾಗರಾಜು ಎಚ್.ಎಸ್**

## ಪರಿಚಯ

ಜಗತ್ತಿನಲ್ಲಿ ಮಹಿಳೆಗಿರುವ ಸ್ಥಾನಮಾನ ಆ ದೇಶದ ಆಧುನಿಕತೆಯ ಮಾನದಂಡ ಎನ್ನಬಹುದು. ಮಹಿಳೆಯ ಸ್ಥಾನಮಾನ ಉತ್ತಮವಾಗಿರದ ಸಮಾಜದ ಸಾಂಸ್ಕೃತಿಕ ಮಟ್ಟ ಉನ್ನತವಾಗಿರಲು ಸಾಧ್ಯವಿಲ್ಲ. ಒಂದು ಸಮಾಜದಲ್ಲಿ ಮಹಿಳೆಯ ಸ್ಥಾನಮಾನ ನಿರ್ಧಾರವಾಗುವುದು ಸಮಾಜದಲ್ಲಿ ತನ್ನ ಅಸ್ಮಿತೆ ಗುರುತಿಸಿಕೊಳ್ಳಲು ಇರುವ ಸಮಾನ ಅವಕಾಶಗಳಿಂದ. ಜಗತ್ತಿನಾದ್ಯಂತ ಹಿಂದಿನಿಂದಲೂ ಸ್ತ್ರೀಯರು ಪುರುಷರ ಯಜಮಾನಿಕೆಯಿಂದ ಶೋಷಣೆಗೆ, ತುಳಿತಕ್ಕೆ ಹಾಗೂ ಪುರುಷರ ದಬ್ಬಾಳಿಕೆಗೆ ಗುರಿಯಾಗಿರುವುದು ಕಾಣಬಹುದು. ಪುರುಷ ಪ್ರಧಾನವಾದ ಈ ಸಮಾಜದಲ್ಲಿ ಸ್ತ್ರೀಯರು ಎಲ್ಲಾ ರಂಗಗಳಲ್ಲಿಯೂ ಪುರುಷರನ್ನು ಅವಲಂಬಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸ್ವಾತಂತ್ರ್ಯದ ಹರಣಕ್ಕೆ ಸಮಾಜದಲ್ಲಿ ರೂಢಿಗತವಾಗಿದ್ದ ಪುರುಷ ಪ್ರಧಾನ ವ್ಯವಸ್ಥೆಯೇ ಕಾರಣವಾಗಿದ್ದು, ಸ್ತ್ರೀಯರು ಈ ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಿರುವುದು ಕಂಡು ಬರುತ್ತದೆ. ಪ್ರಸ್ತುತ ಅಧ್ಯಯನವು ಮಹಿಳಾ ಸಬಲೀಕರಣ ಕುರಿತ್ತಾದಾಗಿದೆ. ಮಹಿಳೆರು ರಾಜಕೀಯ, ಆರ್ಥಿಕ, ಶೈಕ್ಷಣಿಕೆ ಮುಂತಾದ ಕ್ಷೇತ್ರಗಲಲ್ಲಿ ಹೇಗೆ ಸಬಲೀಕರಣಗೊಳ್ಳುತ್ತಿದ್ದಾರೆ ಎಂಬುದನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಭಾರತ ಮಾತ್ರವಲ್ಲದೆ ಜಗತ್ತಿನ ಪ್ರತಿಯೊಂದು ದೇಶಗಳಲ್ಲಿಯೂ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಹಿಂದುಳಿರುವುದನ್ನು ಕಾಣಬಹುದು. ಕೆಲವು ಪ್ರಜಾಪ್ರಭುತ್ವ ದೇಶಗಳಲ್ಲಿ ಮಹಿಳೆಯರು ಆರ್ಥಿಕವಾಗಿ, ಕೆಲವೊಂದು ದೇಶಗಳಲ್ಲಿ ರಾಜಕೀಯವಾಗಿ ಮುಂದುವರಿದಿದ್ದರೆ, ಬಹುತೇಕ ಎಲ್ಲಾ ದೇಶಗಳಲ್ಲೂ ಸ್ತ್ರೀಯರನ್ನು ದ್ವಿತೀಯ ದರ್ಜೆ ಪ್ರಜೆಯಾಗಿ ಕಾಣುವ ಪರಿಸ್ಥಿತಿ ಇಂದಿಗೂ ಇದೆ. ಆದರೆ ಒಂದೊಂದು ದೇಶದಲ್ಲೂ ಇದು ವಿಭಿನ್ನ ಸ್ವರೂಪದಲ್ಲಿ ನೆಲೆಗೊಂಡಿರುವುದು ಕಂಡು ಬರುತ್ತದೆ. 2011 ರ ಜನಗಣತಿಯ ಪ್ರಕಾರ ಯುರೋಪಿನ ದೇಶಗಳ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರು ಶೇ 51.2ರಷ್ಟಿದ್ದಾರೆ. ಯುರೋಪಿನ ದೇಶಗಳ ಒಟ್ಟು ಜನಸಂಖ್ಯೆಯಲ್ಲಿ 2011 ಜನವರಿಯಲ್ಲಿದ್ದಂತೆ ಶೇ.51.2ರಷ್ಟಿದ್ದಾರೆ. ಗ್ರೀಕ್ ವಿದ್ವಾಂಸ ಥೂಸಿಡೈಡ್ ಹೇಳುವಂತೆ ಪ್ರಾಚೀನ ಗ್ರೀಕ್‌ನಲ್ಲಿ ಮಹಿಳೆಯರು ರಾಜಕೀಯವಾಗಿ ತಮ್ಮದೇ ಆದ ಪಾತ್ರವನ್ನು ವಹಿಸುತ್ತಾ ಬಂದಿದ್ದರೂ ("The greatest glory (for women) is to be least talked about among men, whether in praise or blame") ಎಂಬ, ಸ್ತ್ರೀಯರನ್ನು ಪುರುಷರ ಅಧೀನವಾಗಿ ಹಾಗೂ ಪುರುಷನ ಒಳಿತು ಕೆಡುಕುಗಳಿಗೆ ಮಹಿಳೆಯೇ ಕಾರಣಳು ಎಂಬಂತೆ ಗುರುತಿಸಲಾಗುತ್ತಿತ್ತು ಎನ್ನುತ್ತಾರೆ. ೧೯೧೯ರಲ್ಲಿ ಮತದಾನದ ಹಕ್ಕು ದೊರೆಯುವ ಪೂರ್ವದಲ್ಲಿ ಜರ್ಮನಿಯಲ್ಲಿಯೂ ಮಹಿಳೆ ಕುಟುಂಬ ನಿರ್ವಹಣೆಗೆಷ್ಟೇ ಸೀಮಿತವಾಗಿದ್ದಳು. ಎಲ್ಲೆಡೆ ಸಾಮಾನ್ಯ ಎಂಬಂತಿದ್ದ ಕೌಟುಂಬಿಕ ದೌರ್ಜನ್ಯಗಳು, ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬಗಳು ಎಸ್ಟೇಟ್ ಮಾಲೀಕರ ಬಳಿ ಗುಲಾಮರಾಗಿ ದುಡಿಯುತ್ತಿದ್ದ ಸಂದರ್ಭದಲ್ಲಿ ಮಹಿಳೆಯು ಹೆಚ್ಚು ಸಂಕಷ್ಟ ಪರಿಸ್ಥಿತಿಗಳನ್ನು ಎದುರಿಸಿರುವುದನ್ನು ಕಾಣಬಹುದಾಗಿದೆ. ಆಧುನಿಕ ಕಾಲದಲ್ಲಿ ಅತಿ ಹೆಚ್ಚು ಯುದ್ದಗಳನ್ನು ಕಂಡ ಜರ್ಮನಿಯಲ್ಲಿ ಯುದ್ಧೋತ್ತರ ಜರುಗುತ್ತಿದ್ದ ಅನ್ಯಾಯ, ಅತ್ಯಾಚಾರದಂತಹ ದೌರ್ಜನ್ಯಗಳಿಗೆ ಜರ್ಮನಿಯ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಗುರಿಯಾಗಿರುವುದು ಕಂಡು

ಬರುತ್ತದೆ. ಎರಡನೇ ಮಹಾಯುದ್ಧದ ತರುವಾಯ ಜರ್ಮನಿಯ ಬಹುತೇಕ ಮಹಿಳೆಯರಿಗೆ ಯುದ್ಧದಲ್ಲಿ ಗಾಯಗೊಂಡ ತಮ್ಮ ಗಂಡ, ಮಗ ಅಥವಾ ಸಂಬಂಧಿಕರನ್ನು ಶುಶ್ರೂಷೆ ಮಾಡುವುದರ ಜೊತೆಜೊತೆಗೆ ಕುಟುಂಬ ನಿರ್ವಹಣೆಗಾಗಿ ಹೊರಗೆ ದುಡಿಯುವಂತಹ ಕಾರ್ಯವನ್ನು ಮಾಡಿದ್ದಾರೆ. ಆ ಮೂಲಕ ಜರ್ಮನಿಯನ್ನು ಆರ್ಥಿಕವಾಗಿ, ರಾಜಕೀಯವಾಗಿ ಶಕ್ತಿಶಾಲಿಯಾಗಿ ಪುನರ್ ರೂಪಿಸುವಲ್ಲಿ ಮಹಿಳೆಯರ ಪಾತ್ರ ಮಹತ್ತರವಾದುದಾಗಿದೆ.

ಭೌಗೋಳಿಕವಾಗಿ ವಿಸ್ತಾರವಾಗಿರುವ ರಷ್ಯಾದಂತಹ ದೇಶದಲ್ಲಿಯೂ ರಷ್ಯಾ ವಿಭಜನಾ ಪೂರ್ವದಲ್ಲಿ ಕುಟುಂಬದ ಆಗುಹೋಗುಗಳನ್ನು ನೋಡಿ ಕೊಳ್ಳುವುದಕ್ಕಷ್ಟೇ ಮಹಿಳೆಯರ ಸ್ಥಿತಿಗತಿ ಸೀಮಿತವಾಗಿತ್ತು. ರಷ್ಯಾದಲ್ಲಿ ರಾಜ ಮನೆತನಗಳ ಸ್ತ್ರೀಯರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಎಲ್ಲಾ ಅವಕಾಶಗಳನ್ನು ಪಡೆದುಕೊಂಡಿದ್ದರೆ, ಕೆಳ–ಮಧ್ಯಮ ವರ್ಗದ ಸ್ತ್ರೀಯರಿಗೆ ಈ ಅವಕಾಶಗಳು ಇರಲಿಲ್ಲ. ಪುರುಷನಿಗೆ ಸಹಕಾರಿಯಾಗಿ ಜೀವನ ನಡೆಸಬೇಕಾಗಿತ್ತು. ಆದರೆ ೧೯೯೧ರಲ್ಲಿ ರಷ್ಯಾ ದೇಶ ವಿಭಜನೆಯಾದ ತರುವಾಯ ಹೊಸ ಸಂವಿಧಾನವನ್ನು ಅಳವಡಿಸಿಕೊಂಡು ರಷ್ಯಾ ಸ್ತ್ರೀ ಪುರುಷರಿಬ್ಬರಿಗೂ ಸಮಾನ ಹಕ್ಕು ಮತ್ತು ಅವಕಾಶಗಳನ್ನು ನೀಡಿದೆ. ಮೂಲತಃ ಪುರುಷಪ್ರಧಾನ ಸಮಾಜವಾದ ರಷ್ಯಾದಲ್ಲಿ ಇಂದಿಗೂ ಸಂವಿಧಾನದಲ್ಲಿ ಕೊಡಮಾಡಿರುವ ಹಕ್ಕುಗಳಿಗಾಗಿ ಅಲ್ಲಿನ ಸ್ತ್ರೀಯರು ಪ್ರಜಾತಾಂತ್ರಿಕ ವಿಧಾನಗಳ ಮೂಲಕ ಹೋರಾಟ ನಡೆಸುತ್ತಿರುವುದನ್ನು ಕಾಣಬಹುದು.

ಅಮೇರಿಕಾದಂತಹ ಪ್ರಬಲ ರಾಷ್ಟ್ರದಲ್ಲಿಯೂ ಮಹಿಳೆಯರ ಸ್ಥಿತಿ ರಾಜಕೀಯವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ವಿಭಿನ್ನತೆಯಿಂದ ಕೂಡಿದೆ. ಬಹುತೇಕ ವಲಸಿಗ ಸಮುದಾಯಗಳನ್ನು ಹೊಂದಿರುವ ಅಮೇರಿಕಾದಲ್ಲಿ ಆಫ್ರಿಕನ್ ಮೂಲ, ಭಾರತೀಯ ಮೂಲದವರನ್ನು ಒಳಗೊಂಡಂತೆ ಜಗತ್ತಿನ ಬಹುತೇಕ ಎಲ್ಲ ದೇಶಗಳ ಜನತೆಯನ್ನು ಕಾಣಬಹುದು. ಈ ವಲಸಿಗ ಸಮುದಾಯಗಳಲ್ಲಿ ಮಹಿಳೆಯರ ಸ್ಥಾನಮಾನವು ಏಕರೂಪವಾಗಿರದೆ ವಿಭಿನ್ನವಾಗಿದೆ. ಒಟ್ಟಾರೆ ಅಮೇರಿಕಾದ ರಾಜಕೀಯ ಚರಿತ್ರೆಯನ್ನು ಗಮನಿಸಿದರೆ ೨೦೨೦ರವರೆಗೆ ಆ ದೇಶದ ಅಧ್ಯಕ್ಷ ಸ್ಥಾನವನ್ನು ಮಹಿಳೆಯರು (ಕರಿಯ ಅಥವಾ ಬಿಳಿಯ) ಅಲಂಕರಿಸಲು ಸಾಧವಾಗಿಲ್ಲದಿರುವುದನ್ನು ಗಮನಿಸಬಹುದು. ಜೊತೆಗೆ ಭಾರತದಂತೆ ಅಮೇರಿಕಾದಲ್ಲಿ ಜಾತಿವ್ಯವಸ್ಥೆ ಇಲ್ಲದಿದ್ದರೂ, ವರ್ಣಭೇದ ನೀತಿ ಅಲ್ಲಿ ಅಸ್ತಿತ್ವದಲ್ಲಿದೆ. ಮೂಲನಿವಾಸಿ ನೀಗ್ರೋ ಜನರನ್ನು ಅಂದರೆ ಅಲ್ಲಿನ ಕರಿಯ ಜನಾಂಗವನ್ನು ಬಿಳಿಯ ಸಮುದಾಯದ ಜನರು ಗುಲಾಮರಂತೆ ಅತ್ಯಂತ ನಿಕೃಷ್ಟವಾಗಿ ನಡೆಸಿಕೊಂಡ ಕಾರಣಕ್ಕೆ ಅಂತರ್ಯುದ್ಧ ನಡೆದಿರುವುದನ್ನು ಕಾಣಬಹುದು. ಈ ಸಂದರ್ಭದಲ್ಲಿ ಕರಿಯ ಜನಾಂಗದ ಮಹಿಳೆಯರು ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸಿರುವುದಲ್ಲದೆ ಇನ್ನೂ ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗದಿರುವುದನ್ನು ಕಾಣಬಹುದಾಗಿದೆ.

ಒಟ್ಟಾರೆ ಆಫ್ರಿಕಾದ ಬುಡಕಟ್ಟು ಸಮುದಾಯಗಳನ್ನು ಒಳಗೊಂಡಿರುವ ದೇಶಗಳನ್ನು ಹೊರತುಪಡಿಸಿದರೆ ಬಹುತೇಕ ನಾಗರಿಕ ದೇಶಗಳಲ್ಲಿ ಸ್ತ್ರೀಯರನ್ನು ಎರಡನೆ ದರ್ಜೆ ಪ್ರಜೆಯನ್ನಾಗಿ ಕಾಣುತ್ತಿರುವುದು ಮತ್ತು ಪುರುಷನಿಗೆ ಸಮಾನವಾದ ಅವಕಾಶಗಳಿಂದ ಆಕೆಯನ್ನು ದೂರವಿಟ್ಟರುವುದು, ಆ ಮೂಲಕ ಆಕೆಯನ್ನು ಶೋಷಿಸುತ್ತಿರುವುದನ್ನು ಕಾಣಬಹುದಾಗಿದೆ.

ಪ್ರತಿ ದೇಶದಲ್ಲಿಯೂ ತಕ್ಕಮಟ್ಟಿನ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆ ಉಂಟಾಗಬೇಕಾದರೆ, ಆ ದೇಶದ ಸ್ತ್ರೀಯರು ಜಾತಿ, ಲಿಂಗ ತಾರತಮ್ಯವಿಲ್ಲದೆ ಸಾಮಾಜಿಕ ಒಳಗೊಳ್ಳುವಿಕೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆ ಅನಿವಾರ್ಯವಾಗಿದೆ. ಅಲ್ಲಿನ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಎಲ್ಲರ ಪಾಲುದಾರಿಕೆ ಅಗತ್ಯವಾದುದಾಗಿದೆ. ಈ ಹಿನ್ನಲೆಯಲ್ಲಿ ಭಾರತೀಯ ಸಮಾಜವನ್ನು ಅವಲೋಕನ ಮಾಡಿದಾಗ ಮಹಿಳೆಯರ ಪಾಲ್ಗೊಳ್ಳುವಿಕೆ ಅಸಮಾನತೆಯಿಂದ ಕೂಡಿರುವುದು ಕಂಡು ಬರುತ್ತದೆ. ಭಾರತದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಆಚರಣೆಗಳ ಕಾರಣಗಳಿಂದಾಗಿ ಎಲ್ಲ ರಂಗಗಳಲ್ಲೂ ಮಹಿಳೆಯನ್ನು ದ್ವಿತೀಯ ದರ್ಜೆ ಪ್ರಜೆಯಾಗಿ ಪರಿಗಣಿಸಲಾಗಿದೆ. ಭಾರತದಲ್ಲಿ ಜಾತಿಪದ್ಧತಿಯಂತೆಯೇ ಲಿಂಗ ಅಸಮಾನತೆಯು ನಿರಂತರವಾಗಿ ಬೆಳೆದು ಬಂದಿದ್ದು, ಲಿಂಗತಾರತಮ್ಯ ಇಲ್ಲಿನ ಸಮಾಜದಲ್ಲಿ ಎದ್ದು ಕಾಣುವ ಅಂಶವಾಗಿದೆ. ಭಾರತದಲ್ಲಿ ಲಿಂಗ ಅಸಮಾನತೆ ಎಂಬುದು ತಂತಾನೆ ರೂಪುಗೊಂಡಿಲ್ಲ. ಜೊತೆಗೆ ಇದು ವಿಕಾಸವಾದದ ಭಾಗವೂ ಆಗಿಲ್ಲ. ಬದಲಾಗಿ ಇದು ಪುರುಷ ಪ್ರಧಾನ ಸಮಾಜದ ಒಂದು ಭಾಗವಾಗಿ ರಾಜ್ಯಾಧಿಕಾರ ಸೃಷ್ಟಿಸಿದ ಮತ್ತು ಪೋಷಿಸಿಕೊಂಡು ಬಂದ ವ್ಯವಸ್ಥೆಯಾಗಿದೆ. ಲಿಂಗ ಭಿನ್ನತೆಯ ಆಚರಣೆಗಳೂ ಸ್ವಯಪ್ರೇರಿತವಲ್ಲ. ರಾಜ್ಯವು ಅದನ್ನು ಬೆಂಬಲಿಸಿ, ಗಟ್ಟಿಗೊಳಿಸಿ ಜಾರಿ ಮಾಡಿತು. ಜೊತೆಗೆ ಇಲ್ಲಿನ ಜಾತಿ ವ್ಯವಸ್ಥೆ ಮತ್ತು ಲಿಂಗ ಸಂಬಂಧಗಳು ಒಂದಕ್ಕೊಂದು ಅವಿನಾಭಾವ ಸಂಬಂಧ ಹೊಂದಿರುವುದರಿಂದ ಭಾರತದಲ್ಲಿ ಮಹಿಳೆಯರನ್ನು ಕುರಿತ ಅಧ್ಯಯನಗಳು ಗಮನ ಸೆಳೆಯುತ್ತವೆ. ಜೊತೆಗೆ ೨೦ನೇ ಶತಮಾನದಲ್ಲಾದಂತಹ ಪ್ರಜಾಪ್ರಭುತ್ವದ ವಿಕಾಸ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಎಂಬ ಪರಿಕಲ್ಪನೆಗಳನ್ನು ಸಮಾಜದಲ್ಲಿ ಬಿತ್ತಿದ ಕಾರಣದಿಂದಾಗಿ ಮಹಿಳೆಯರನ್ನು ಕುರಿತಾದ ತಾರತಮ್ಯದ ಅರಿವು ಮೂಡಿ ಭಾರತವಷ್ಟೇ ಅಲ್ಲ, ಎಲ್ಲ ಕಡೆಯೂ ಮಹಿಳಾ ಹಕ್ಕುಗಳ ಜಾಗೃತಿ ಮೂಡಿರುವುದನ್ನು ಗುರುತಿಸಿಬಹುದು. ೧೯೪೮ರಲ್ಲಿ ವಿಶ್ವಸಂಸ್ಥೆಯ ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆಯಿಂದ ಎಚ್ಚೆತ್ತ ಮಹಿಳಾ ಸಮೂಹ, ಸಮಾನ ವೇತನ, ಸಮಾನ ಹಕ್ಕುಗಳಿಗಾಗಿ ಹೋರಾಟ ಆರಂಭಿಸಿತು. ಜೊತೆಗೆ ಇಪ್ಪತ್ತನೆಯ ಶತಮಾನದ ಎಪ್ಪತ್ತರ ದಶಕದಲ್ಲಿ, ಪ್ರಪಂಚದಾದ್ಯಂತ ಕಾಣಿಸಿಕೊಂಡ ಸ್ತ್ರೀವಾದ ಚಳವಳಿ ಚಿಂತನೆ, ವಿಮರ್ಶೆಯ ಪರಿಣಾಮವೇ ಸ್ತ್ರೀಪರ ಹಲವಾರು ಧೋರಣೆಗಳು ತಳೆಯಲು ಸಾಧ್ಯವಾಯಿತು. ಸ್ತ್ರೀವಾದದ ಮೊದಲ ಸ್ತ್ರೀ ಎಂದು ಖ್ಯಾತರಾದ ಮೇರಿವುಲ್‌ಸ್ಟನ್ ಕ್ರಾಫ್ಟ್, 'ದ ಸೆಕೆಂಡ್ ಸೆಕ್ಸ್' ಎಂಬ ಕೃತಿಯ ಮೂಲಕ ಜಗತ್ತಿನಲ್ಲಿಯೇ ಮನೆ ಮಾತಾದ 'ಸಿಮೋನ್ ದ ಬೋವಾ, ಬೆಟ್ಟಿ ಫ್ರೀಡನ್, ಮೇರಿ ವಿಲ್‌ಮನ್ನ ಆಧುನಿಕ ಸ್ತ್ರೀವಾದಿ ಚಿಂತಕರ ಮೇಲೆ ಅತ್ಯಂತ ಪ್ರಭಾವ ಬೀರಿರುವ ಕೇಟ್ ಮಿಲ್ಲೆಟ್, ಮಹಿಳಾ ಚಿಂತಕಿ ಶುಲಾಮಿತ್ ಫೈರ್‌ಸ್ಟೋನ್ ಮೊದಲಾದವರು ಪುರುಷರ ಸಾಂಸ್ಕೃತಿಕ ಯಜಮಾನ್ಯವನ್ನು ಗುರಿಯಾಗಿಟ್ಟುಕೊಂಡು ಗಂಡು ಹೆಣ್ಣಿನ ನಡುವಿನ ಸಾಮಾಜಿಕ – ಸಾಂಸ್ಕೃತಿಕ ಬಿರುಕುಗಳನ್ನು ಅದು ಉಂಟು ಮಾಡಿರುವ ತಲ್ಲಣಗಳಿಂದ ಮಹಿಳೆಯರು ಅನುಭವಿಸುತ್ತಿರುವ ಅಪಾರ ನೋವುಗಳನ್ನು ವೈಚಾರಿಕವಾಗಿ ವಿಶ್ಲೇಷಿಸಿರುವುದು ಕಂಡು ಬರುತ್ತದೆ. ಲಿಂಗಭೇದದ ತೀವ್ರತೆ ಮತ್ತು ಅದರ ದಟ್ಟ ಪರಿಣಾಮಗಳು ಹೇಗೆ ಮಹಿಳೆಯರನ್ನು ಕತ್ತು ಹಿಸುಕುತ್ತದೆ ಎಂಬುದರ ಹಿನ್ನೆಲೆಯಲ್ಲಿ ಪುರುಷರಿಂದ ರಚಿತವಾದ ಸಾಹಿತ್ಯದಲ್ಲಿಯೂ ಹುಡುಕಾಟ ನಡೆಸಿರುವುದು ಕಂಡು ಬರುತ್ತದೆ. ಹೀಗೆ ಆರಂಭವಾದ ಮಹಿಳಾ ಸಬಲೀಕರಣದ ಹೋರಾಟ

ಇಂದಿಗೂ ಬೇರೆ ಬೇರೆ ಆಯಾಮಗಳೊಂದಿಗೆ ಮುಂದುವರಿಯುತ್ತಾ, ಮಹಿಳೆಯನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸುತ್ತಿರುವುದನ್ನು ಕಾಣಬಹುದಾಗಿದೆ.

ಭಾರತ ಜಗತ್ತಿನಲ್ಲೇ ಅತ್ಯಂತ ವೈವಿಧ್ಯತೆಯಿಂದ ಕೂಡಿರುವ ದೇಶವಾಗಿದ್ದು, ಹಲವಾರು ಭಾಷೆ, ಸಂಸ್ಕೃತಿ ಇಲ್ಲಿ ಕಂಡು ಬರುತ್ತದೆ. ಆದರೆ ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಗಮನಿಸಿದಾಗ, ಸಾಮಾಜಿಕವಾಗಿ ವಿಘಟನೆ ಹೊಂದಿರುವುದನ್ನು ಗಮನಿಸಬಹುದು. ಸ್ತ್ರೀ ಕೂಡಾ ಎಲ್ಲಾ ಹಂತಗಳಲ್ಲೂ ಹಿಂದುಳಿದಿರುವುದಕ್ಕೆ ಸಮಾಜದಲ್ಲಿ ರೂಢಿಗತವಾಗಿದ್ದ ಪುರುಷ ಪ್ರಧಾನ ವ್ಯವಸ್ಥೆಯೇ ಕಾರಣ ಎಂದು ಭಾವಿಸಿದರೂ ಇಲ್ಲಿನ ಧಾರ್ಮಿಕ ಕಟ್ಟಳೆಗಳು ಆಕೆಯನ್ನು ಪುರುಷನ ಬಂಧಿಯಾಗಿಯೇ ಇರುವಂತೆ ಮಾಡಿವೆ. ವೇದಗಳ ಯುಗದಲ್ಲಿ ಪುರುಷನಷ್ಟೇ ಸ್ವಾತಂತ್ರ್ಯ, ಸಮಾನತೆ ಹಾಗೂ ಶೈಕ್ಷಣಿಕ ಅವಕಾಶಗಳನ್ನು ಹೊಂದಿದ್ದ ಮಹಿಳೆ ನಂತರದಲ್ಲಿ ಮನುಧರ್ಮಶಾಸ್ತ್ರ ಕೇಂದ್ರಿತ ಕಾನೂನು, ಕಟ್ಟಳೆಗಳಿಗೆ ಒಳಗಾಗಿ ಕೆಲವು ಜಾತಿಗಳಲ್ಲಿ ದ್ವಿತೀಯದರ್ಜೆ, ಕೆಲವು ಜಾತಿಗಳಲ್ಲಿ ತೃತೀಯ ದರ್ಜೆ ಪ್ರಜೆಯಾಗಿಯೇ ಬಾಳುತ್ತಿರುವುದು ಗಮನಾರ್ಹವಾದುದಾಗಿದೆ. ಹೀಗೆ ಅಸಮಾನತೆಯಿಂದ ಹಾಗೂ ತಾರತಮ್ಯದಿಂದ ಕೂಡಿದ ಮಹಿಳಾ ಸಮುದಾಯವನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸ್ತ್ರೀ ವಿಮೋಚನೆಯ ಪ್ರಯತ್ನ ಚಳವಳಿಯ ರೂಪದಲ್ಲಿ ಇಪತ್ತನೇ ಶತಮಾನದಲ್ಲೇ ಭಾರತದಲ್ಲಿ ಆರಂಭವಾಯಿತು. ಈ ಶತಮಾನದಲ್ಲಿ ಬೀಸಿದ ಪಶ್ಚಿಮದ ಆಧುನಿಕತೆಯ ಗಾಳಿ, ಬ್ರಿಟಿಷ್ ಆಡಳಿತ ತಂದ ಹಲವಾರು ಸುಧಾರಣಾ ಕಾಯಿದೆಗಳು, ರಾಜಾರಾಮ್ ಮೋಹನರಾಯರು, ಜ್ಯೋತಿಬಾಪುಲೆ, ಸಾವಿತ್ರಿ ಬಾಪುಲೆ, ಡಾ.ಅಂಬೇಡ್ಕರ್, ಗಾಂಧೀಜಿ, ನಾರಾಯಣಗುರು, ಪೆರಿಯಾರ್ ರಾಮಸ್ವಾಮಿ ನಾಯ್ಕರ್, ರಾಮಮನೋಹರ ಲೋಹಿಯಾರಂತವರು ಸ್ತ್ರೀಯರ ಸ್ಥಾನಮಾನಗಳ ಸುಧಾರಣೆಗಾಗಿ ತಮ್ಮದೇ ಆದ ಕೊಡುಗೆಯನ್ನು ನೀಡಿದರು.

ಕರ್ನಾಟಕದಲ್ಲಿ ಕ್ರಿ.ಶ.೧೨ನೇ ಶತಮಾನದಲ್ಲೇ ಸ್ತ್ರೀಯರ ಸಮಾನತೆಗಾಗಿ ಹಾಗೂ ಲಿಂಗತಾರತಮ್ಯದ ನಿವಾರಣೆಗಾಗಿ ಬಸವಣ್ಣನವರ ನೇತೃತ್ವದಲ್ಲಿ ಸಮಾಜ ಸುಧಾರಣಾ ಆಂದೋಲನ ನಡೆದರೆ, ಆಧುನಿಕ ಸಂದರ್ಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ನೇತೃತ್ವದಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ತ್ರೀಯರ ಸ್ಥಾನಮಾನ ಸುಧಾರಣೆಗಾಗಿ ಅನೇಕ ಕಾಯಿದೆಗಳನ್ನು, ಶಾಲಾಕಾಲೇಜುಗಳನ್ನು ಸ್ಥಾಪಿಸಲಾಯಿತು. ಎಪ್ಪತ್ತರ ದಶಕದಲ್ಲಿ ರೂಪುಗೊಂಡ ಸಾಮಾಜಿಕ ಚಳವಳಿಗಳಾದ ರೈತ ಚಳವಳಿ, ಹಿಂದುಳಿದ ವರ್ಗಗಳ ಚಳವಳಿ ಹಾಗೂ ದಲಿತ ಚಳವಳಿಗಳು ಸ್ತ್ರೀಯರ ವಿಚಾರವನ್ನು ತಮ್ಮ ಹೋರಾಟದ ಅಂಗವಾಗಿ ಮಾಡಿಕೊಂಡ ಕಾರಣಕ್ಕೆ ಸ್ತ್ರೀಯರ ಸಮಸ್ಯೆಗಳು ಸಮಾಜದ ಮುನ್ನೆಲೆಗೆ ಬಂದವು. ಅದರಲ್ಲೂ ಬಸವಲಿಂಗಪ್ಪನವರ ಬೂಸ ಚಳವಳಿಯ ಕಾರಣಕ್ಕೆ ದಲಿತ ಸಮಾಜದಲ್ಲಿ ರೂಪುಗೊಂಡ ಅರಿವು ಮತ್ತು ಹೋರಾಟ ಪ್ರಜ್ಞೆಯು ದಲಿತ ಹಾಗೂ ಬಂಡಾಯ ಸಾಹಿತ್ಯಕ್ಕೆ ಪ್ರೇರಣೆ ನೀಡಿತಲ್ಲದೆ, ದಲಿತ ಮಹಿಳೆಯರ ಮೇಲಾಗುತ್ತಿದ್ದ ಅನೇಕ ಬಗೆಯ ದೌರ್ಜನ್ಯ, ದಬ್ಬಾಳಿಕೆಗಳು ಸಾಹಿತ್ಯದ ರೂಪ ಪಡೆದುಕೊಂಡು ಸಮಾಜದ ಮುಖ್ಯವಾಹಿನಿಗೆ ಬಂದವು. ಇಷ್ಟೆಲ್ಲಾ ಸುಧಾರಣಾ ಪ್ರಕ್ರಿಯೆಗಳು ನಡೆದರೂ ಸಹ ಭಾರತೀಯ ಜಾತಿವ್ಯವಸ್ಥೆಯ ವಿವಿಧ ಸ್ತರಗಳಲ್ಲಿ ಸ್ತ್ರೀ ವಿವಿಧ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಭಾರತದಲ್ಲಿ ಶ್ರೇಣೀಕೃತ ಜಾತಿ ವ್ಯವಸ್ಥೆ ಅಸ್ತಿತ್ವದಲ್ಲಿರುವುದರಿಂದ ಉಚ್ಚ ಜಾತಿಯ ಸ್ತ್ರೀಯರ ಸಮಸ್ಯೆಗಳಿಗೂ ಹಾಗೂ ಕೆಳಜಾತಿಯ ಸ್ತ್ರೀಯರ ಸಮಸ್ಯೆಗಳಿಗೂ ವ್ಯತ್ಯಾಸವಿದೆ. ಭಾರತದಲ್ಲಿರುವ ಒಂದೊಂದು ಧರ್ಮದಲ್ಲೂ, ಪಂಗಡದಲ್ಲೂ ಒಂದೊಂದು ಬಗೆಯ ಸಮಸ್ಯೆ, ಸವಾಲುಗಳನ್ನು ಸ್ತ್ರೀಯು ಎದುರಿಸುತ್ತಿದ್ದಾಳೆ. ಹಾಗಾಗಿಯೇ ಭಾರತದಲ್ಲಿ ಇಂದಿನವರೆಗೂ ಮಹಿಳಾ ಸಮಸ್ಯೆಗಳನ್ನು ಕುರಿತಾದ ಹೋರಾಟಗಳು ಸೈದ್ಧಾಂತಿಕವಾಗಿ ಏಕರೂಪತೆಯನ್ನು ಪಡೆದು ಕೊಂಡಿಲ್ಲದಿರುವುದಕ್ಕೆ ಕಾರಣವಾಗಿದೆ.

೧೯ನೇ ಶತಮಾನದ ಆರಂಭದಿಂದ ಜಗತ್ತಿನಾದ್ಯಂತ ಮಹಿಳಾ ಹಕ್ಕುಗಳು, ಕಲ್ಯಾಣ, ಸುಧಾರಣೆ, ಶೈಕ್ಷಣಿಕ ಜಾಗೃತಿ ಹಾಗೂ ಅಭಿವೃದ್ಧಿಯ ವಿಷಯಗಳನ್ನು ರಾಜ್ಯ ಮತ್ತು ನಾಗರಿಕ ಸಮಾಜದಲ್ಲಿ ಚರ್ಚಿಸಲಾಗುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಈ ಪರಿಕಲ್ಪನೆ ಬದಲಾಗುತ್ತಿದೆ. ಹೆಣ್ಣನ್ನು ಪರಿಭಾವಿಸುವ ದೃಷ್ಟಿಕೋನವು ಸಬಲೀಕರಣವೆನ್ನುವುದಾಗಿದ್ದು, 'ಮಹಿಳೆಯರ ಅಧಿಕಾರೀಕರಣ ಪ್ರಕ್ರಿಯೆ'ಯಾಗಿ ಗುರುತಿಸಲ್ಪಡುತ್ತಿದೆ. ಅಂದರೆ ಮಹಿಳೆಯರು ಅಧಿಕಾರವನ್ನು ಚಲಾಯಿಸುವುದು ಎಂಬುದಾಗಿದೆ. ಈ ಎರಡು ಪ್ರಕ್ರಿಯೆಗಳು ಮಹಿಳಾ ಸಬಲೀಕರಣದ ಸಾಧನಗಳಾಗಿವೆ.

ಸಬಲೀಕರಣ ಎಂದರೆ ಸಾಮಾನ್ಯ ಅರ್ಥದಲ್ಲಿ ಸಕಾರಾತ್ಮಕ ಬೆಳವಣಿಗೆ, ಪ್ರಗತಿ ಪಥದತ್ತ ಮುನ್ನಡೆಯುವುದು ಎಂದಾಗುತ್ತದೆ. ಸಬಲೀಕರಣ ಎಂದರೆ ಕೇವಲ ಆರ್ಥಿಕ ಅಭಿವೃದ್ಧಿಯಲ್ಲ. ಅದು ಬಹು ಆಯಾಮಗಳನ್ನು ಹೊಂದಿರುವಂಥ ಒಂದು ಪರಿಕಲ್ಪನೆ. ಸಬಲೀಕರಣಕ್ಕೆ ವಿಶಾಲವಾದ ಅರ್ಥವಿದ್ದು, ಸಾಮಾಜಿಕ ಅಭಿವೃದ್ಧಿಯೇ ನಿಜವಾದ ಸಬಲೀಕರಣ. ಜನರ ಜೀವನ ಮಟ್ಟದಲ್ಲಿ ಸುಧಾರಣೆ, ಮೂಲಭೂತ ಅವಶ್ಯಕತೆಗಳ ಪೂರೈಕೆ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವಂಥ ಸಾಮಾಜಿಕ ವ್ಯವಸ್ಥೆಯ ನಿರ್ಮಾಣ ಇನ್ನೂ ಹತ್ತು ಹಲವು ಪರಿಸ್ಥಿತಿಗಳು ಆರ್ಥಿಕ ಬೆಳವಣಿಗೆಯ ಜೊತೆಗೆ ನಿರ್ಮಾಣವಾದಾಗ ಮಾತ್ರ ಅಭಿವೃದ್ಧಿ ನಿಜವಾದ ಅರ್ಥದಲ್ಲಿ ಉಂಟಾಗುವುದು. ಸಬಲೀಕರಣವು ಆಯ್ಕೆ ಮತ್ತು ಅವಕಾಶಗಳ ವಿಸ್ತರಣೆಯಲ್ಲಿ ಮಾನವನ ಸಾಮರ್ಥ್ಯಗಳನ್ನು ವೃದ್ಧಿಸುವ ಮೂಲಕ ಪ್ರತಿಯೊಬ್ಬ ವ್ಯಕ್ತಿಯು ಮೌಲ್ಯಯುತ ಹಾಗೂ ಆತ್ಮಗೌರವವುಳ್ಳ, ಜೀವನವನ್ನು ನಡೆಸಲು ಸಹಕರಿಸುವ ಬಹುಮುಖ ಆಯಾಮಗಳುಳ್ಳ ಪ್ರಕ್ರಿಯೆಯಾಗಿದೆ. ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಯೂನಿಫೆಮ್ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ, "ಮಹಿಳೆಗೆ ತನ್ನ ಸ್ವಸಾಮರ್ಥ್ಯದ ಬಗೆಗೆ ಅರಿವು, ತಮ್ಮ ಆಯ್ಕೆಗಳನ್ನು ತಾವೇ ನಿರ್ಧರಿಸಿಕೊಳ್ಳಲು ಸಾಮರ್ಥ್ಯ ಮತ್ತು ಅವಕಾಶ, ಸಂಪನ್ಮೂಲಗಳನ್ನು ಹೊಂದುವ ಹಕ್ಕು, ಕುಟುಂಬದೊಳಗೆ ಮತ್ತು ಹೊರಗೆ ತಮ್ಮ ಬದುಕನ್ನು ತಾವೇ ನಿಯಂತ್ರಿಸಿಕೊಳ್ಳ ಬಲ್ಲ ಶಕ್ತಿ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನೆಲೆಯಲ್ಲಿ ಮಹಿಳಾ ಸಮಾನತೆಯನ್ನು ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಉಂಟು ಮಾಡುವಂತೆ ಪ್ರಭಾವಿಸಬಲ್ಲ ಸಾಮರ್ಥ್ಯ" ಎಂಬ ಈ ಅಂಶಗಳು ಅಗತ್ಯವೆಂಬುದನ್ನು ಗುರುತಿಸುತ್ತದೆ. ಮಹಿಳೆಯರನ್ನು ರಾಷ್ಟ್ರೀಯ ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ತರದೇ ರಾಷ್ಟ್ರೀಯ ಪ್ರಗತಿ ಹಾಗೂ ಸಮಾಜದ ಆರೋಗ್ಯಪೂರ್ಣ ಬೆಳವಣಿಗೆ ಅಸಾಧ್ಯ. ಆದ್ದರಿಂದ ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯಲ್ಲಿ ಮಹತ್ವದ ಪಾತ್ರವಹಿಸುತ್ತಿರುವ ಮಹಿಳೆಯರನ್ನು ದೇಶದ ಅಭ್ಯುದಯದ ಪ್ರತಿಯೊಂದು ಚಟುವಟಿಕೆಯಲ್ಲಿಯೂ ಪಾಲುದಾರರಾಗಲು ಅವಕಾಶ ಕಲ್ಪಿಸಿಕೊಡಬೇಕಾದುದು ಅಗತ್ಯ.

ಒಟ್ಟಾರೆಯಾಗಿ ಇಂದು ಮಹಿಳೆಯರು ಹಲವು ಕ್ಷೇತ್ರಗಳಲ್ಲಿ ಸಾಧನೆಗೆಯ್ಯುತ್ತಿರುವುದು ಸಂತೋಷದ ವಿಷಯವಾಗಿದೆ. ಇಂದು

ಅವರ ಸಾಧನೆಯ ಈಡೀ ಸಮಾಜವೇ ಗೌರವಿಸುವಂತಾಗಿದೆ. ಪುರಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷನಿಗೆ ಸರಿಸಮಾನವಾಗಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಚಾರವಾಗಿದೆ. ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ಈ ಮೂರು ಕ್ಷೇತ್ರಗಳಲ್ಲಿ ಹೆಚ್ಚು ಮಹಿಳೆಯರು ಪ್ರಭುದ್ಧ ಮಾನಕ್ಕೆ ಬಂದಿರುವುದನ್ನು ನಾವು ಗಮನಿಸಬಹುದು. ಒಟ್ಟಾರೆಯಾಗಿ ಮಹಿಳೆಯರು ಇಂದು ಸಬಲೀರಣದತ್ತು ದಾಪುಗಾಲು ಇಟ್ಟಿರುವುದು ಸಮಾನತೆಯ ಪ್ರತೀಕವೆಂದ ಹೇಳಬಹುದು. ಪುರುಷ, ಮಹಿಳೆ ಎಂಬ ಬೇಧಭಾವವಿಲ್ಲದೆ ಪೂರಕ ಸಹಾಯದೊಂದಿಗೆ ಕಾರ್ಯನಿರ್ವಹಿಸಿದರೆ ಸಮಸಮಾಜ ಅಥವಾ ಸಮಾನತೆಯ ಸಮಾಜವನ್ನು ನಿರ್ಮಿಸುವಲ್ಲಿ ಯಾವ ಅಡೆತಡೆಗಳು ಬರದಿರಲಿ ಹಾಗೂ ಮಹಿಳೆಯರು ಎಲ್ಲಾ ರಮಗದಲ್ಲಿಯೂ ಪುರುಷನಷ್ಟೆ ಸ್ಥಾನಮಾನಗಳು ದೊರೆಯಲಿ ಎಂಬುದೇ ನಮ್ಮೆಲ್ಲರ ಆಶಯ.

## ಆಕಾರ ಗ್ರಂಥಗಳು


1. ಮೈಕಲ್ ಸ್ಕಾಟ್.,೨೦೦೯, ದಿ ರೈಸ್ ಆಫ್ ವುಮೆನ್ ಇನ್ ಏನ್ಷಿಯಂಟ್ ಗ್ರೀಸ್, ಹಿಸ್ಟರಿ ಟುಡೆ, ಸಂಪುಟ.೫೯, ಸಂಚಿಕೆ,೧೧, (ಆಧಾರ.:ವಿಕಿಪಿಡಿಯಾ)
2. ರೂಪ ತೇಜಾವತಿ ಆರ್ (೨೦೨೨) ಸಬಲೀಕರಣದ ಹಾದಿಯಲ್ಲಿ ದಲಿತ ಮಹಿಳೆಯರು. ಬಿ.ಕೆ ಪಬ್ಲಿಷಿಂಗ್ ಹೌಸ್, ಬೆಂಗಳೂರು,
3. ರಾಮಚಂದ್ರನ್.ಟಿ. ಸೇಲನ್, ಎ ಸೋಶಿಯೋ ಎಕನಾಮಿಕ್ ಎಂಪವರ್‌ಮೆಂಟ್ ಅಂಡ್ ಸೆಲ್ಫ್ ಹೆಲ್ಪ್ ಗ್ರೂಪ್ಸ್, ಸೋಶಿಯಲ್ ವೆಲ್‌ಫೇರ್, ಸೆಪ್ಟೆಂಬರ್, ೨೦೦೫, ಪುಟ.೩.
4. ರೇಮಂಡ್ ವಿಲಿಯಮ್ಸ್., ಮಾರ್ಕ್ಸಿಸಂ ಅಂಡ್ ಲಿಟರೇಚರ್, ನ್ಯೂಯಾರ್ಕ, ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, ಪುಟ.೪
5. ಬಾಟ್ಲಿವಾಲಾ, ಶ್ರೀಲತಾ, ಟ್ರಾನ್ಸ್ಫರ್ಮಿಂಗ್ ಆಫ್ ಪೊಲಿಟಿಕಲ್ ಕಲ್ಚರ್: ಮಹಿಳಾ ಸಾಮಾಕ್ಯ ಎಕ್ಸ್‌ಪೀರಿಯನ್ಸ್, ಪುಟ.೧೩
6. ಉದಯ್‌ಕುಮಾರ್ ಶೆಟ್ಟಿ, ಸ್ತ್ರೀಶಕ್ತಿ ಯೋಜನೆ – ಮಹಿಳಾ ಸಬಲೀಕರಣ, ಸ್ಪರ್ಧಾಚೈತ್ರ, ಜನವರಿ ೨೦೦೭, ಪುಟ.೫.
7. ಬಾಟ್ಲಿವಾಲಾ, ಶ್ರೀಲತಾ,ದ ಮೀನಿಂಗ್ ಆಪ್ ವಿಮೆನ್ಸ್ ಎಂಪವರ್‌ಮೆಂಟ್; ನ್ಯೂ ಕಾನ್ಸ್‌ಪ್ಟ್ ಫ್ರಂ ಆಕ್ಸನ್, ಪುಟ.೧೮
8. ಅನುಪಮಾ ನಿರಂಜನಾರವರು ಆಧುನಿಕ ಕನ್ನಡ ಮಹಿಳಾ ಸಾಹಿತಿ
9. ಮುನಿವೆಂಕಟಪ್ಪ.ವಿ, ೧೯೯೮, ದಲಿತ ಚಳುವಳಿ ಮತ್ತು ಸಾಹಿತ್ಯ, ಪುಟ.೧೫
10. ಮುನಿವೆಂಕಟಪ್ಪ.ವಿ, ೧೯೯೮, ದಲಿತ ಚಳುವಳಿ ಮತ್ತು ಸಾಹಿತ್ಯ, ಪುಟ.೧೫
11. ಹನುಮಂತರಾಯ.ಜಿ., ಜನಪದ ಮಹಾಕಾವ್ಯಗಳಲ್ಲಿ ದಲಿತ ಸಂವೇದನೆ, ಪುಟ.೧೦
12. ಸುಮಿತ್ರಬಾಯಿ.ಬಿ.ಎನ್., ೧೯೯೯, ಸ್ತ್ರೀವಾದ, ಪುಟ.೧೭
13. ಪ್ರಿಯದರ್ಶಿನಿ.ಡಿ, ಮಂಗಳಾ., ೨೦೦೭, ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ–ಒಂದು ಪ್ರವೇಶಿಕೆ, ಪುಟ.೨೮